ಅ) ಬೆಂಗಳೂರು ನಗರದಲ್ಲಿ ಶಾಲಾ ಮಕ್ಕಳ ನೆರವಿನಿಂದ ಗಿಡ ನೆಡುವ ಕಾರ್ಯಕ್ರಮಗಳನ್ನು ೧೯೮೮-೮೯ ರವರೆಗೆ ಹಮ್ಮಿಕೊಂಡಿದ್ದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ನಂತರ ಈ ಕಾರ್ಯಕ್ರಮವನ್ನು ನಿಲ್ಲಿಸಲಾಗಿದೆಯೇ?

ಇ) ಬೆಂಗಳೂರು ನಗರದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಮತ್ತೆ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಶಾಲಾ ಮಕ್ಕಳ ನೆರವಿನಿಂದ ಗಿಡ ನೆಡುವ ಪ್ರತ್ಯೇಕವಾದ ಯಾವುದೇ ಕಾರ್ಯಕ್ರಮವನ್ನು 1988-89ರ ಅವಧಿಯಲ್ಲಿ ಹಾಕಿಕೊಂಡಿರುವುದಿಲ್ಲ. ಗಿಡ ನೆಡುವ ಕಾರ್ಯಕ್ರಮಗಳಲ್ಲಿ ಶಾಲಾ ಮಕ್ಕಳನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗಿದೆ. ಆ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ನೆಟ್ಟಿರುವ ಸಸಿಗಳ ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ. 1990ರ ನಂತರ ಶಾಲಾವನ ಎಂಬ ಪ್ರತ್ಯೇಕ ಶೀರ್ಷಿಕೆ ಪ್ರಾರಂಭವಾಗಿದ್ದು ಶಾಲೆಗಳಲ್ಲಿ ಬೆಳೆಸಿರುವ ಸಸಿಗಳ ವಿವರ ಕೆಳಕಂಡಂತಿದೆ.

1990-91	-	35 ಹೆ (11 ಸಾವಿರ ಸಸಿಗಳು) 5 ಶಾಲೆಗಳಲ್ಲಿ.
1991-92	-	3197 ಸಸಿಗಳು (29 ಶಾಲೆಗಳಲ್ಲಿ)
1992-93	-	5690 ಸಸಿಗಳು (18 ಶಾಲೆಗಳಲ್ಲಿ)
1993-94	-	8650 ಸಸಿಗಳು (110 ಶಾಲೆಗಳಲ್ಲಿ)
1994-95	-	ನೇ ಸಾಲಿನಿಂದ ಈ ಶಾಲಾವನ ಯೋಜನೆ ಕಾರ್ಯಕ್ರಮ ಇರುವುದಿಲ್ಲ.

ಆ) ಸಸಿ ನೆಡುವ ಕಾರ್ಯಕ್ರಮಗಳಲ್ಲಿ ಇಂದಿಗೂ ಸಹ ಆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಶಾಲಾ ಮಕ್ಕಳಿಂದ ಸಸಿಗಳನ್ನು ನೆಡಿಸಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.

ಇ) ಬೆಂಗಳೂರು ನಗರದಲ್ಲಿ "ನಗರ ಸಮೀಕರಣ" ಯೋಜನೆಯ ಅಡಿಯಲ್ಲಿ ಪ್ರತಿ ವರ್ಷವೂ ಸುಮಾರು 45 ಸಾವಿರದಿಂದ 50 ಸಾವಿರ ಗಿಡಗಳನ್ನು ನೆಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿ 1983 ರಿಂದ 1989ರ ಅವಧಿಯಲ್ಲಿ ನೆಟ್ಟಿರುವ ಗಿಡಗಳ ಸಂಖ್ಯೆ

ಕ್ರ. ಸಂ.	ವರ್ಷ	ನಗರದ ರಸ್ತೆ ಬದಿ	ಶಾಲಾ: ಕಾಲೇಜು ಆವರಣ	ಸಾರ್ವಜನಿಕ ಉದ್ಯಾನ ವನಗಳ ಮತ್ತು ಇತರೆ ಸಂಸ್ಥೆಗಳು	ಬ್ಲಾಕ್ ನೆಡುತೋಪು		
					ಗುಂಡಿಗಳಲ್ಲಿ ಸಸಿ ಬೆಳೆಸುವುದು	ಕಂದಕಾಧಾರಿತ ನೆಡುತೋಪು	ಉಚಿತ ಸಸಿ ವಿತರಿಸುವುದು
1.	1983-84	20247	20299 ಗಿಡಗಳು 360 ಶಾಲಾ: ಕಾಲೇಜುಗಳು	7020 ಗಿಡಗಳು, 18 ಉದ್ಯಾನವನಗಳು ಮತ್ತು ಇತರೆ ಸಂಸ್ಥೆಗಳು.	-	215940	10.00 ಲಕ್ಷ
2.	1984-85	5000	2500 ಗಿಡಗಳು 20 ಶಾಲಾ: ಕಾಲೇಜುಗಳು	4800 ಗಿಡಗಳು 67 ಉದ್ಯಾನವನಗಳು ಮತ್ತು ಇತರೆ ಸಂಸ್ಥೆಗಳು	738 ಗಿಡಗಳು (6 ಹೆ)	44 ಹೆ. (88000 ಸಸಿಗಳು)	10.00 ಲಕ್ಷ
3.	1985-86	70000	2585ಗಿಡಗಳು 37 ಶಾಲಾ: ಕಾಲೇಜುಗಳು	5173 ಗಿಡಗಳು 39 ಉದ್ಯಾನವನಗಳು	166728 ಗಿಡಗಳು (130 ಹೆ)	54ಹೆ. (128000 ಸಸಿಗಳು)	5.00 ಲಕ್ಷ
4.	1986-87	62000	25000 ಗಿಡಗಳು 364 ಶಾಲೆಗಳು	3946 ಗಿಡಗಗಳು 40 ಉದ್ಯಾನವನಗಳು ಮತ್ತು ಇತರೆ ಸಂಸ್ಥೆಗಳು	97ಹೆ. 12050 ಗಿಡಗಳು	19 ಹೆ. (3800 ಗಿಡಗಳು)	5.00 ಲಕ್ಷ
5.	1987-88	46425	5020 ಗಿಡಗಳು 71 ಶಾಲೆಗಳು	1395 ಗಿಡಗಳು 3 ಉದ್ಯಾನವನಗಳು	51 ಹೆ. (17750 ಗಿಡಗಳು)	33 ಹೆ. (66000 ಗಿಡಗಳು)	5.00 ಲಕ್ಷ
6.	1988-89	59200	10235 ಗಿಡಗಳು 25 ಶಾಲೆಗಳು	—	56 ಹೆ. (24134 ಗಿಡಗಳು)	-	5.40 ಲಕ್ಷ